# ಸಿ.ಡಿ ತೋರಣ

ಕಲಾತ್ಮಕ ದೃಷ್ಟಿಕೋನವಿದ್ದವರು ಎಂತಹ ಕಸವನ್ನು ಬೇಕಾದರೂ ಕಲಾಕೃತಿಯನ್ನಾಗಿಸುತ್ತಾರೆ. ಹಾಳಾದ ಸಿ.ಡಿಗಳನ್ನು ಬಳಸಿ, ಕಾನಸೂರಿನ ಗಂಗಾ ಹೆಗಡೆಯವರು ಸುಂದರ ಬಾಗಿಲು ತೋರಣವನ್ನು ತಯಾರಿಸಿದ್ದಾರೆ. ಸಿ.ಡಿಗಳನ್ನೇ ಆಧಾರವಾಗಿ ಬಳಸಿಕೊಂಡು ಅವಕ್ಕೇ ಶೃಂಗಾರ ಮಾಡಿ, ದಾರಗಳಿಂದ ಒಂದನ್ನೊಂದು ಕಲಾತ್ಮಕವಾಗಿ ಜೋಡಿಸಿ ಬಾಗಿಲಿಗೆ ತೋರಣವನ್ನಾಗಿಸಿದ್ದಾರೆ. ಈ ಕಸ ಸಿ.ಡಿಗಳಿಗೂ ಒಂದು ಕಲಾತ್ಮಕತೆಯನ್ನು ತಂದುಕೊಟ್ಟ ಕ್ರಿಯಾಶೀಲ ಕಲಾವಿದೆ ಗಂಗಾ ಹೆಗಡೆಯವರು, ಹಳೆ ಬಟ್ಟೆಗಳಿಂದ ಕೌದಿಯನ್ನೂ ತಯಾರಿಸುತ್ತಾರೆ.

**-ಗ.ಮ.ತುಂಬೇಮನೆ, ಶಿರಸಿ**





# ಗಣ ಕಟ್ಟುವುದು

ಶರಾವತಿ ನದಿಯ ತಟದಲ್ಲಿರುವ ಅನಿಲಗೋಡ್ ಎಂಬ ಗ್ರಾಮದಲ್ಲಿ ನಡೆಯುವ ಅತೀ ಪುರಾತನವಾದ ವಿಶಿಷ್ಟ ಹಿನ್ನಲೆಯುಳ್ಳ ಹಬ್ಬ ಬಂಡೀ ಹಬ್ಬ. ಈ ದಿನ ಊರಿನ ಕುಮಾರ ರಾಮ ಮಹಾಸತಿ ದೇವಿಯ ಆರಾಧನಾ ಮಹೋತ್ಸವದಂದು ತಲೆಯ ಮೇಲೆ ಹೊಂಬಾಳೆ, ಕಳಶ ಇನ್ನಿತರೆ ಹೂವುಗಳಿಂದ ಅಲಂಕರಿಸುವುದಕ್ಕೆ ಗಣ ಕಟ್ಟುವುದು ಎನ್ನುತ್ತಾರೆ. ಈ ವಿಶಿಷ್ಟ ಆಚರಣೆ ಸುಮಾರು 600 ವರ್ಷಗಳಿಂದಲೂ ನಡೆದುಕೊಂಡು ಬಂದಿದೆ.

**-ಬಳಕೂರು ವಿ.ಎಸ್.ನಾಯಕ್, ಬೆಂಗಳೂರು**

# ಪತ್ತಾಸು

ಈಗಿನ ಅಲ್ಮೇರಾಗಳು, ಲಾಕರುಗಳು, ಸ್ಟೋರ್ ರೂಮುಗಳು ಕೊಡುತ್ತಿರುವ ಸವಲತ್ತನ್ನು ಹಿಂದೆ ಪತ್ತಾಸು ಕೊಡುತ್ತಿತ್ತು. ಕೆಲವು ಮನೆಗಳಲ್ಲಿ ಯಜಮಾನನ ಮಲಗುವ ಮಂಚವಾಗಿದ್ದು ಒಳಗಡೆ ಅಮೂಲ್ಯ ವಸ್ತುಗಳನ್ನೆಲ್ಲ ಅದು ತನ್ನ ಹೊಟ್ಟೆಯಲ್ಲಿಟ್ಟುಕೊಂಡಿದ್ದರೆ ಇನ್ನು ಕೆಲವು ಮನೆಗಳಲ್ಲಿ ಅಕ್ಕಿಯನ್ನು, ಅದರ ಚಿಕ್ಕ ವಿನ್ಯಾಸದಲ್ಲಿ ಉಪ್ಪನ್ನು ತುಂಬಿಕೊಂಡು ಬಿದ್ದಿರುತ್ತಿತ್ತು . ಈಗ ಯಾರಿಗೂ ಬೇಡವಾಗಿ ಅಂಗಳದಲ್ಲಿ ಬಿದ್ದಿದೆ.

**- ರವಿರಾಜ ಹಾಲಂಬಿ, ಉಡುಪಿ**

